ಎಚ್.ಎಸ್. ರಾಘವೇಂದ್ರರಾವ್

## ಜಿ.ಎಸ್. ಆಮೂರ

# ಮುಗಿದ ಪಯಣ ಮುಗಿಯದ ಹುಡುಕಾಟ

ಇತ್ತೀಚೆಗೆ ನಿಧನರಾದ ಹಿರಿಯ ವಿಮರ್ಶಕ ಜಿ.ಎಸ್. ಆಮೂರ (8 ಮೇ 1925 – 28 ಸೆಪ್ಟೆಂಬರ್ 2020) ಕನ್ನಡ ವಿಮರ್ಶೆಯ ಘನತೆ, ಗೌರವವನ್ನು ಹೆಚ್ಚಿಸಿದ ಲೇಖಕರಲ್ಲಿ ಒಬ್ಬರು. ಅಪಾರ ಓದು ಹಾಗೂ ವಿದ್ವತ್ತಿನಿಂದ ಕೂಡಿದ ಅವರ ಕೃತಿಗಳು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ. ಅವರ ಪ್ರಖರ, ನಿಖರ ವಿಮರ್ಶೆಯ ರೀತಿ ಮತ್ತು ಬರವಣಿಗೆಯ ಬದುಕಿನ ಕುರಿತಂತೆ ಕನ್ನಡದ ಇಬ್ಬರು ವಿಮರ್ಶಕರು ಇಲ್ಲಿ ಬರೆದಿದ್ದಾರೆ.

ಮಾಗಿದ ಹಣ್ಣು ಮರದಿಂದ ಬೇರೆಯಾಗುವಂತೆ, ಹಿರಿಯರಾದ ಜಿ.ಎಸ್. ಆಮೂರರು ತೊಂಬತ್ತೈದರ ತುಂಬು ವಯಸ್ಸಿನಲ್ಲಿ ಲೋಕಯಾತ್ರೆಯನ್ನು ಮುಗಿಸಿದ್ದಾರೆ. ಆದರೆ, ಅವರ ಬರವಣಿಗೆಯೆಂಬ ಹಣ್ಣು ನಮ್ಮದಾಗಿ ಉಳಿದಿದೆ. ಅದನ್ನು ಒಳಗೊಳ್ಳುವ, ಬೆಳೆಯುವ ಕೆಲಸವನ್ನು ಕನ್ನಡ ಸಂಸ್ಕೃತಿ ಸನ್ನಿವೇಶವು ಮಾಡಬೇಕಾಗಿದೆ. ಇದು ಆರಾಧನೆಯಾಚೆಗೆ ಉಳಿದು, ಪ್ರೀತಿ, ಗೌರವ ಮತ್ತು ವಿಮರ್ಶಕ ದೂರಗಳೊಂದಿಗೆ ನಡೆಯಬೇಕು. ಅವರು ಲೋಕವನ್ನು, ಸಾಹಿತ್ಯಲೋಕವನ್ನು ಅಂತೆಯೇ ಚಲನಶೀಲವಾದ ಕರ್ನಾಟಕ ಲೋಕವನ್ನು ಕಂಡ ಹಾಗೂ ಕಂಡರಿಸಿದ ಬಗೆಗಳನ್ನು ಅರಿಯುವುದು, ಇತರರ ದರ್ಶನದೊಂದಿಗೆ ಅದನ್ನು ಹೋಲಿಸಿ ಅವರ ವಿಶಿಷ್ಟತೆಯನ್ನು ಗುರುತಿಸುವುದು ನಮ್ಮ ಹೊಣೆಗಾರಿಕೆ.